## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ. ವಿಜಯ ಎಸ್. ತೆಂಡೂಲ್ಕರ್, ರಂಗನಪಲ್ಕೆ, ಕೌಡೂರು ಗ್ರಾಮ ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರ ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ D.O.No. Compt/UPLOK/MYS-2569/2014/PP, ದಿನಾಂಕ:24.05.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 24.05.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಈ ಕೆಳಗಿನಂತೆ ತಿಳಿಸಿರುತ್ತಾರೆ.

ಪ್ರಕರಣದ ದೂರುದಾರರಾದ ಶ್ರೀ. ವಿಜಯ ಎಸ್. ತೆಂಡೂಲ್ಕರ್, ರಂಗನಪಲ್ಕೆ, ಕೌಡೂರು ಗ್ರಾಮ ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ರವರು ಕಾರ್ಕಳ ತಾಲ್ಲೂಕಿನ ಬೈಲೂರು ಗ್ರಾಮದಲ್ಲಿ ಶ್ರೀ ಐವನ್ ಮಿರಾಂಡ ಎಂಬ ವ್ಯಕ್ತಿ ಅಕ್ರಮವಾಗಿ ರಾತ್ರಿ ಹೊತ್ತು ಕಲ್ಲುಗಣಿಗಾರಿಕೆ ಮಾಡಿ ಸಾರ್ವಜನಿಕರಿಗೆ ತೊಂದರೆ ಮಾಡುತ್ತಿರುವುದಾಗಿ ಈ ಕುರಿತು ಎದುರುದಾರರಿಗೆ ದೂರು ಸಲ್ಲಿಸಿದರು ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂದು ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಿ ಅಕ್ರಮ ಗಣಿಗಾರಿಕೆ ನಿಲ್ಲಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನನ್ವಯ ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

ಶ್ರೀ ರವಿರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರವರು ತಮ್ಮ ಆಕ್ಷೇಪಣೆಯಲ್ಲಿ ಬೈಲೂರು ಗ್ರಾಮ ಪಂಚಾಯಿ ವ್ಯಾಪ್ತಿಯ ಕೌಡೂರು ಗ್ರಾಮದ ರಂಗನಪಾಲ್ಕೆ ಎಂಬಲ್ಲಿ ಖಾಸಗಿ ಜಮೀನಿನಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ನಡೆಯುತ್ತಿರುವ ಕುರಿತು ಸಾರ್ವಜನಿಕ ದೂರು ಸ್ವೀಕೃತಗೊಂಡಿದ್ದು, ಅದರಂತೆ, ಗ್ರಾಮ ಕರಣೀಕರೊಂದಿಗೆ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಸದರಿ ಗಣಿಗಾರಿಕೆ ನಡೆಯುತ್ತಿರುವ ಜಾಗವು ಶ್ರೀ ಐವಾನ್ ಮಿರಾಂದ, ರಂಗನಪಲ್ಕೆ ಇವರ ಖಾಸಗಿ ಜಮೀನು ಎಂಬ ಬಗ್ಗೆ ತಿಳಿದು ಬಂದಿದ್ದು, ಅದರಂತೆ , ಶ್ರೀ ಐವಾನ್ ಮಿರಾಂದ ಇವರನ್ನು ಸ್ಥಳಕ್ಕೆ ಕರೆಸಲಾಗಿ ಅವರು ಸದರಿ ಜಾಗ ತಮ್ಮ ಪಟ್ಟ ಜಾಗವೆಂಬುದಾಗಿ ವಿಷಯವನ್ನು ಖಾತರಿ ಪಡಿಸಿರುತ್ತಾರೆ.ಸದರಿ ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸುವಂತೆ ಸೂಚಿಸಿ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಸದರಿ ಜಮೀನಿನ ಮಾಲಿಕರು ಗಣಿಗಾರಿಕೆಯನ್ನು ನಿಲ್ಲಿಸಿ, ಮಣ್ಣನ್ನು ಗಣಿಗಾರಿಕೆ ನಡೆಸಲಾದ ಜಾಗದಲ್ಲಿ ಹಾಕಿ ಮಣ್ಣಿನಿಂದ ಮುಚ್ಚಿರುತ್ತಾರೆ ಎಂಬುದು ಮೇಲೆ ಹೇಳಿದಂತೆ ಜಂಟಿ ಪರಿಶೀಲನೆ ಕಾಲದಲ್ಲಿ ಕಂಡುಬಂದಿರುತ್ತದೆ. ಎಂದು ತಿಳಿಸಿರುತ್ತಾರೆ. ಇದಲ್ಲದೆ ಗ್ರಾಮ ಪಂಚಾಯಿತಿ ಕಛೇರಿಗೆ ಬಂದ ದೂರಿನ ಬಗ್ಗೆ ತಕ್ಷಣವೇ ಸ್ಪಂದಿಸಿ ಅಕ್ರಮ ಕಲ್ಲುಗಣಿಗಾರಿಯನ್ನು ನಿಲ್ಲಿಸಲಾಗಿದೆ ಹಾಗೂ ಗ್ರಾಮ ಪಂಚಾಯಿತಿ ವತಿಯಿಯಿಂದ ಜರುಗಿಸ ಬೇಕಾದ ಸೂಕ್ತ ಕಾನೂನು ಕ್ರಮವನ್ನು ದೂರುದಾರರ ಅರ್ಜಿಗೆ ಸ್ಪಂದಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ, ಗ್ರಾಮ ಪಾಚಾಯಿತಿ ವತಿಯಿಂದಾಗಲೀ ಅಥವಾ ತನ್ನಿಂದಾಗಲಿ ಯಾವುದೇ ಕರ್ತವ್ಯಲೋಪವೆಸಗಿಲ್ಲವೆಂದು ತಿಳಿಸಿರುತ್ತಾರೆ.ಶ್ರೀಮತಿ ನಿರ್ಮಲ ಕಾರ್ಯದರ್ಶಿ ಬೈಲೂರು ಗ್ರಾಮ ಪಂಚಾಯತಿ ತಮ್ಮ ಆಕ್ಷೇಪಣೆಯಲ್ಲಿ ಶ್ರೀ ರವಿರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರವರು ಸಲ್ಲಿಸಿದ ಆಕ್ಷೇಪಣೆಯನೇ ಅನುಸರಿಸಿ ತಮ್ಮ ಆಕ್ಷೇಪಣೆ ಸಲ್ಲಿಸಿರುತಾರೆ.

ಎದುರುದಾರರು ಆಕ್ಷೇಪಣೆ ಮೇರೆಗೆ ದೂರುದಾರರು ಪ್ರತ್ಯುತ್ತರವನ್ನು ಕರೆಯಲಾಗಿದ್ದು,ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ಶ್ರೀ ರವಿರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರು ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವ ಶ್ರೀ ಐವಾನ್ ಮಿರಾಂಡ ರವರೊಡನೆ ಶಾಮೀಲಾಗಿರುತ್ತಾರೆ. ಸದರಿ ಶ್ರೀ ಐವಾನ್ ಮಿರಾಂಡರವರು ಅಕ್ರಮವಾಗಿ ಕಟ್ಟಡ ಕಟ್ಟಿದ್ದು,ಈ ಬಗ್ಗೆ ಸ್ಥಳೀಯರಿಂದ ಮೇಲಾಧಿಕಾರಿಗಳಿಗೆ ನೀಡಿದ ದೂರಿನ ಮೇಲೆ ಮೇಲಾಧಿಕಾರಿಗಳಿಂದ ಸೂಕ್ತ ಆದೇಶ ಬಂದರು, ಶ್ರೀ ರವಿರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವರು ಇದುವರೆಗೂ ತಮ್ಮ ವರದಿಯನ್ನು ಸಲ್ಲಿಸಿರುವುದಿಲ್ಲ. ಎದುರುದಾರರುಗಳು ಅಕ್ರಮ ಗಣಿಗಾರಿಕೆ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗಿದೆ ಎಂದು ತಿಳಿದಿದ್ದು, ಸದರಿ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿದ ನಂತರ ಕ್ರಮ ಜರುಗಿಸಿರುತ್ತಾರೋ ಅಥವಾ ಅದಕ್ಕೂ ಮೊದಲೇ ಕ್ರಮ ಜರುಗಿಸಿರುತ್ತಾರೋ ಎಂಬುದರ ಬಗ್ಗೆ ವಿವರಣೆ ನೀಡಿರುವುದ್ದಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ಈ ಹಂತದಲ್ಲಿ ತನಿಖೆಯನ್ನು ಆರಕ್ಷಕ ಉಪಾಧೀಕ್ಷಕರು, ಉಡುಪಿ ಇವರಿಗೆ ವಹಿಸಿದ್ದು, ಸದರಿಯವರು ತನಿಖೆಯನ್ನು ನಿರ್ವಹಿಸಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ತಮ್ಮ ವರದಿಯಲ್ಲಿ ಕಾರ್ಕಳ ತಾಲೂಕು ಕೌಡೂರು ಗ್ರಾಮದ ರಂಗಪಲ್ಕೆ ಎಂಬ ಸ್ಥಳಕ್ಕೆ ಭೇಟಿ ನೀಡಿ, ಸದರಿ ಸ್ಥಳದಲ್ಲಿನ ಅಕ್ಕಪಕ್ಕದಲ್ಲಿ ರಬ್ಬರ್‌ಗಿಡಗಳನ್ನು ಬೆಳೆಸಿರುವುದು ಕಂಡು ಬಂದಿರುತ್ತದೆ. ಕಲ್ಲು ತೆಗೆದ ಜಾಗದಲ್ಲಿ ಇದ್ದ ಹಳ್ಳವನ್ನು ಅಲ್ಲಲ್ಲಿ ಮುಚ್ಚಿದ್ದು, ಅದರ ಮೇಲೆ ಹುಲ್ಲು ಹಾಗೂ ಗಿಡಗಳು ಕಂಡುಬಂದಿರುತ್ತವೆ. ಶ್ರೀ ಐವಾನ್ ಮಿರಾಂಡ ರವರನ್ನು ವಿಚಾರಿಸಲಾಗಿ ತಾನುಕಳೆದ ಎರಡು ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿದ ಪ್ರಯುಕ್ತ ಗಣಿ ಇಲಾಖೆಯವರು ದಿ:17/07/2014 ರಂದು ದಂಡ ವಿದಿಸಿದ ನಂತರದಲ್ಲಿ ತಾನು ಸದರಿ ಪ್ರದೇಶದಲ್ಲಿ ಯಾವುದೇ ರೀತಿಯ ಗಣಿಗಾರಿಕೆಯನ್ನು ನಡೆಸಿಲ್ಲವೆಂದು ತಿಳಿಸಿರುತ್ತಾರೆ. ಸ್ಥಳೀಯರು ಸಹ ಎರಡು ವರ್ಷದಿಂದ ಅಲ್ಲಿ ಯಾವುದೇಗಣಿಗಾರಿಕೆ ನಡೆದಿಲ್ಲವೆಂದು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ಸದರಿ ತನಿಖಾ ವರದಿಯ ಬಗ್ಗೆ ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ, ತನಿಖಾಧಿಕಾರಿಯವರು ಸ್ಥಳ ತನಿಖಾ ನಿರ್ವಹಿಸುವ ಪೂರ್ವದಲ್ಲಿ ತಮಗೆ ಯಾವುದೇ ನೋಟಿಸನ್ನು ನೀಡಿರುವುದಿಲ್ಲ ಹಾಗೂ ತಮ್ಮ ಅನುಪಸ್ಥಿತಿಯಲ್ಲಿ ಸ್ಥಳ ತನಿಖೆಯನ್ನು ನಡೆಸಿರುತ್ತಾರೆ. ಆದ್ದರಿಂದ, ಅವರ ವರದಿಯು ಸತ್ಯಕ್ಕೆ ದೂರವಾದ ವರದಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ದೂರಿನಂಶಗಳನ್ನು, ಎದುರುದಾರರ ಆಕ್ಷೇಪಣೆಗಳನ್ನು, ದೂರುದಾರರ ಪ್ರತ್ಯುತ್ತರವನ್ನು ತನಿಖಾಧಿಯವರ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಕಾರ್ಕಳ ತಾಲ್ಲೂಕಿನ ಬೈಲೂರು ಗ್ರಾಮದ ರಂಗನಪಲ್ಕೆ ಎಂಬ ಜಾಗದಲ್ಲಿ ಶ್ರೀ ಐವಾನ್ ಮಿರಾಂಡ ಇವರು ಅಕ್ರಮವಾಗಿ ಕಲ್ಲುಗಣಿಗಾರಿಕೆಯನ್ನು ಮಾಡಿದ್ದು ಕಂಡು ಬಂದಿರುತ್ತದೆ. ಈ ಸಂಬಂಧ ಉಡುಪಿಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ 40 ಮೆಟ್ರಿಕ್ ಟನ್ ಕಲ್ಲನ್ನು ತೆಗೆದಿರುವ ಬಗ್ಗೆ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 3(1), 42, 43 ಮತ್ತು 44ರ ಪ್ರಕಾರ ರೂ.25,000/- ದಂಡವನ್ನು ವಿದಿಸಿರುತ್ತಾರೆ (ದಂಡ ವಿಧಿಸಿ ನೀಡಿರುವ ನೋಟೀಸ್‌ನ ಪ್ರತಿಯನ್ನು ಹಾಜರುಪಡಿಸಲಾಗಿದೆ).ದಿ:15/17/2014 ರಂದು ಮೇಲೆ ಹೇಳಿದಂತೆ ಸ್ಥಳಪರಿಶೀಲನೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮ ಲೆಕ್ಕಿಗರು ಗ್ರಾಮ ಸಹಾಯಕ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನೌಕರರು ಇವರ ಸಮ್ಮುಖದಲ್ಲಿ ಸ್ಥಳ ಪಂಚನಾಮೆಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಕೈಗೊಂಡಿರುತ್ತಾರೆ (ಸದರಿ ಸ್ಥಳ ಮಹಜರ್‌ನ ಪ್ರತಿಯನ್ನು ಹಾಜರುಪಡಿಸಲಾಗಿದೆ). ಆದರೆ, ಸದರಿ ಸ್ಥಳವು ಶ್ರೀ ಐವಾನ್ ಮಿರಾಂಡ ರವರ ಪಟ್ಟಾ ಸ್ಥಳವೆಂದು ತಿಳಿಸಿರುತ್ತಾರೆಂದು 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಆದರೆ ಸದರಿ ಸ್ಥಳವು ಶ್ರೀ ಐವಾನ್ ಮಿರಾಂಡದವರಿಗೆ ಸೇರಿದ ಪಟ್ಟ ಸ್ಥಳವೆಂದು ತೋರಿಸಲು ಯಾವುದೇ ದಾಖಲೆಯನ್ನು

ಹಾಜರುಪಡಿಸಿರುವುದಿಲ್ಲ. ಸ್ಥಳ ಮಹಜರಿನಲ್ಲಿ ಸದರಿ ಸರ್ವೇ ನಂಬರ್ 289/2 ಶ್ರೀ ಐವಾನ್ ಮಿರಾಂಡ ರವರ ಪಟ್ಟಾ ಜಾಗವೆಂದು ಗ್ರಾಮ ಕರಣೀಕರು ಮಾಹಿತಿ ನೀಡಿರುತ್ತಾರೆಂದು ನಮೂದಿಸಲಾಗಿದೆ. ಸ್ಥಳ ಮಹಜರ್ ನಂತರ ದಿ:17/07/2014 ರಂದು ದೂರುದಾರರಿಗೆ ನೋಟೀಸ್ ನೀಡಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ದಂಡವನ್ನು ವಿಧಿಸಿರುವುದು ಕಂಡುಬಂದಿರುತ್ತದೆ. ಸದರಿ ಸ್ಥಳದಲ್ಲಿ ಕಲ್ಲು ಗಣಿಗಾರಿಕೆ ಮಾಡಿರುವ ಬಗ್ಗೆ ಪೋಟೋವನ್ನು ಹಾಜರುಪಡಿಸಿರುತ್ತಾರೆ.

ದೂರುದಾರರು ಈ ಸಂಸ್ಥೆಗೆ ದೂರನ್ನು ದಿ:30/07/2014 ರಂದು ಸಲ್ಲಿಸಿರುತ್ತಾರೆ. 4ನೇ ಎದುರುದಾರರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ದಿ:27/06/2014 ರಂದು ನೋಟೀಸ್ ನೀಡಿ ಕೌಡೂರು ಗ್ರಾಮದ ಸಾರ್ವಜನಿಕರು ಜಿಲ್ಲಾ ಪಂಚಾಯತಿಯತ್, ಉಡುಪಿ ಇವರಿಗೆ ನೀಡಿದ ದೂರು ಅರ್ಜಿಗೆ ಸಂಬಂಧಿಸಿದಂತೆ ಸದರಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯವರು ನೀಡಿದ ಸೂಚನೆ ಮೇರೆಗೆ ಸ್ಥಳ ಪರಿಶೀಲನೆ ನಡೆಸಿ ಅಕ್ರಮ ಗಣಿಗಾರಿಕೆ ನಡೆಸಿರುವುದು ಕಂಡುಬಂದ ಕಾರಣ ಶ್ರೀ ಐವಾನ್ ಜೆ ಮಿರಾಂಡ ಇವರಿಗೆ ನೋಟೀಸ್ ನೀಡಿರುವುದು ಕಂಡುಬಂದಿರುತ್ತದೆ. ಆದರೆ, ದೂರುದಾರರು ತಾವು ಮತ್ತು ಸ್ಥಳೀಯರು ಮೌಖಿಕವಾಗಿ ಎದುರುದಾರರಿಗೆ ಅಕ್ರಮ ಗಣಿಗಾರಿಕೆಯ ಬಗ್ಗೆ ಮಾಹಿತಿಯನ್ನು ನೀಡಿದ್ದರೂ ಸಹ ಯಾವುದೇ ಕ್ರಮವನ್ನು ಜರುಗಿಸಿರುದಿಲ್ಲವೆಂದು ತಿಳಿಸಿರುತ್ತಾರೆ. ಸ್ಥಳ ಮಹಜರ್‌ನ್ನು ಪರಿಶೀಲಿಸಲಾಗಿ, ಸ್ಥಳ ಮಹಜರ್ ಕಾಲದಲ್ಲಿ ಜಿಲ್ಲಾ ಪಂಚಾಯಿತಿಯ ದೂರನ್ನು ನೀಡಿದ್ದ ಯಾವುದೇ ವ್ಯಕ್ತಿಯ ಹಾಜರಾತಿಯನ್ನು ಪಡೆಯಲು ಎದುರುದಾರರು ಪ್ರಯತ್ನಿಸಿರುವುದು ಕಂಡುಬರುವುದಿಲ್ಲ. ದಿನಾಂಕ:27.06.2014ರಂದು ಶ್ರೀ ಐವಾನ್ ಜೆ.ಮಿರಾಡ ಇವರಿಗೆ ನೀಡಿರುವ ನೋಟೀಸ್‌ನಲ್ಲಿ ಕೌಡೂರು ಗ್ರಾಮದ ಸರ್ವೆ ನಂ.289/2ರ 2.21 ಎಕರೆ ಜಮೀನಿನಲ್ಲಿ ಅಕ್ರಮವಾಗಿ ಗಣಿಗಾರಿಕೆಯನ್ನು ಸದರಿ ಶ್ರೀ ಐವಾನ್ ಜೆ.ಮಿರಾಂಡರವರು ನಡೆಸುತ್ತಿದ್ದು ಈ ಬಗ್ಗೆ ಪಂಚಾಯಿತಿಯಿಂದ ಯಾವುದೇ ಪರವಾನಿಗೆಯನ್ನು ಪಡೆದಿಲ್ಲವೆಂದು, ಆದ್ದರಿಂದ ಅಕ್ರಮ ಗಣಿಗಾರಿಕೆಯನ್ನು ತಕ್ಷಣ ನಿಲ್ಲಿಸಬೇಕೆಂದು ತಿಳಿಸಿರುವುದು ಕಂಡುಬರುತ್ತದೆ ಹಾಗೂ ಸದರಿ ನೋಟೀಸ್‌ನಲ್ಲಿ ಜಿಲ್ಲಾ ಪಂಚಾಯಿತಿಯ ಈ ಅಕ್ರಮಗಣಿಗಾರಿಕೆಯ ಬಗ್ಗೆ ಕೌಡೂರು ಗ್ರಾಮದ ಸಾರ್ವಜನಿಕರು ದೂರು ನೀಡಿದ್ದರೆಂದು ಸಹ ತಿಳಿದುಬರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿದಲ್ಲಿ, ಎದುರುದಾರರು ಅಕ್ರಮ ಗಣಿಗಾರಿಕೆ ತಮ್ಮ ಅಧಿಕಾರ ವ್ಯಾಪ್ತಿಯ ಸ್ಥಳದಲ್ಲೇ ನಡೆಯುತ್ತಿದ್ದರೂ ಸಹ,ಅದನ್ನು ಪರಿಗಣಿಸದೇ ಮತ್ತು ಅಕ್ರಮ ಗಣಿಗಾರಿಕೆಯನ್ನು ತಡೆಯುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳದೇ ಇರುವುದು ಕಂಡುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ರವಿರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀಮತಿ ನಿರ್ಮಲ ಕಾರ್ಯದರ್ಶಿ ಬೈಲೂರು ಗ್ರಾಮ ಪಂಚಾಯತಿ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1) (ii) ಮತ್ತು (iii)ರ ಅಡಿಯಲ್ಲಿ ದರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/547/ಗ್ರಾಪಂಕಾ/2017 ಬೆಂಗಳೂರು, ದಿನಾಂಕ–17–07–2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ರವಿರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀಮತಿ ನಿರ್ಮಲ ಕಾರ್ಯದರ್ಶಿ ಬೈಲೂರು ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಪುಟ ಸಂಖ್ಯೆ 01 ರಿಂದ 36 ರ ವರೆಗೂ ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ.
6. ಶ್ರೀ ರವಿರಾಜ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಬೈಲೂರು ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ
7. ಶ್ರೀಮತಿ ನಿರ್ಮಲ ಕಾರ್ಯದರ್ಶಿ ಬೈಲೂರು ಗ್ರಾಮ ಪಂಚಾಯತಿ, ಕಾರ್ಕಳ ತಾಲ್ಲೂಕು, ಉಡುಪಿ ಜಿಲ್ಲೆ
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.